ಶ್ರೀ ಎಚ್. ಡಿ. ದೇವೇಗೌಡ.—ನಾನು ಒಂದು ಸಲಹೆ ಮಾಡುತ್ತೇನೆ. ಇಲ್ಲಿಂದ ಸ್ಪೆಷಲ್ ಸ್ಕ್ವಾಡ್ ಸಿ ಐ.ಡಿ. ಆಫೀಸರ್ಸ್‌ಗೆ ಕಳುಹಿಸಿ ಸ್ಥಳದಲ್ಲಿ ನಡೆದಂತಹ ಘಟನೆ ಬಗ್ಗೆ ರಿಪೋರ್ಟು ದಯಮಾಡಿ ತರಿಸಿ ನಮ್ಮ ಲೋಕಲ್ ಆಫೀಸರ್ಸ್ ಮೇಲೆ ಪ್ರಭಾವಬೀರಿ ಗಲಾಟೆ ಮಾಡುತ್ತಿದ್ದಾರೆ. ಈ ಘಟನೆ ಬಗ್ಗೆ ಆಲ್ಲಿಯವರನ್ನು ವಿಚಾರಮಾಡಿದರೆ ಗೊತ್ತಾಗುತ್ತದೆ. ನಿರಪರಾಧಿಗಳಾದ ೨೦–೨೫ ಜನ ಹರಿಜನರನ್ನು ಹಿಡಿದಿದ್ದಾರೆ. ಅವರಿಗೆ ಏನೂ ಗೊತ್ತಿಲ್ಲ. ಆದುದರಿಂದ ಸಿ ಐ.ಡಿ. ಆಫೀಸರ್ ಕಳುಹಿಸಿ ಅವರ ಮುಖಾಂತರ ಎನ್‌ಕ್ವೈರಿ ಮಾಡಿಸಿ ಅವರ ರಿಪೋರ್ಟ್ ಬಂದಮೇಲೆ ಯಾರುಯಾರು ಇನ್‌ವಾಲ್ವ್ ಆಗಿದ್ದಾರೆ ಪರಿಶೀಲನೆ ಮಾಡಿ.

Starting the Bunding Works in Yadagiri, Shahapur and Raichur Taluk

ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ).—ನನ್ನ ಹತ್ತಿರ ಒಂದು ಟೆಲಿಗ್ರಾಮ್ ಇದೆ. ಮಾನ್ಯ ಅಗ್ರಿ ಕಲ್ಚರ್ ಮಿನಿಸ್ಟರು ನಮ್ಮ ಕಡೆಗೆ ಬರಗಾಲ ಪ್ರದೇಶ ಅಲ್ಲಿ ಬಂಡಿಂಗ್ ವರ್ಕ್ ನಡೆದಿದೆ ಎಂದು ಹೇಳಿದರು. ಆದರೆ ಆಲ್ಲಿ ಸರ್ವ ವರ್ಕ್ ಕಂಪ್ಲೀಟ್ ಆಗಿದೆ. ಸುಮಾರು ೩೫೦ ಜನ ಲೇಬರರ್ಸ್ ಒಂದು ವಾರದಿಂದ ಉಪವಾಸ ಕೂತಿದ್ದಾರೆ. ನನಗೆ ಬಂದಿರುವ ಟೆಲಿಗ್ರಾಂನಲ್ಲಿ ಈ ರೀತಿ ಇದೆ :—

> "Survey completed two blocks, since one week 350 labourers workless starving, further survey of Bunding work please be started, requested."

ಇದೂ ಅಲ್ಲದೆ ಬೇರೆ ಕಡೆ ಕೂಡ ಕೆಲಸ ಬಹಳ ಸಾವಕಾಶದಿಂದ ಆಗುತ್ತಿದೆ. ಆ ಕಡೆ ಮಂತ್ರಿಗಳು ತೀವ್ರವಾದ ಗಮನಕೊಡಬೇಕು.

ಶ್ರೀ ಭಾಪುಗೌಡ ರಾಯಪ್ಪ.—ಅದೇ ರೀತಿ ಷಹಾಪುರದಿಂದ ೪೦೦ ಜನರು ಬೆಣ್ಣೆಹೊಳೆಯಲ್ಲಿ ಕೆಲಸ ಇಲ್ಲದೆ ಉಪವಾಸ ಇದ್ದಾರೆ. ಸ್ಪ್ಯಾಫ್ ಇಲ್ಲದ ಕಾರಣ ಕೆಲಸ ಸ್ಥಗಿತವಾಗಿದೆ. ಸುತ್ತಮುತ್ತಲ ಜನರೂ ಕೆಲಸವಿಲ್ಲದೆ ಗಂಭೀರ ಪರಿಸ್ಥಿತಿ ಉದ್ಭವಿಸಿದೆ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ಅನುಕೂಲ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್..ಡಿ. ದೇವೇಗೌಡ.—ರಾಯಚೂರಿನಲ್ಲಿ ಕೆಲವು ಭಾಗದಲ್ಲಿ ಕ್ಷಾಮಪರಿಸ್ಥಿತಿ ಭೀಕರವಾಗಿದೆ. ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಏಕಸದಸ್ಯ ಆಯೋಗದ ವರದಿ ಬಂದಮೇಲೆ ಚರ್ಚೆಮಾಡಬೇಕು ಎಂದು ನಿರ್ಣಯ ತೆಗೆದುಕೊಂಡಿದೆ. ಆದರೆ ಅವರಿಗೆ ರಾಯಚೂರ್ ಪ್ರವಾಸ ಮಾಡುವುದಕ್ಕೆ ಅಪ್ಪಣೆಯಿಲ್ಲ. ಅವರು ಬೀದರ್, ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಗಳನ್ನು ನೋಡಿಕೊಂಡು ಬರುತ್ತಾರೆ, ಆದ್ದರಿಂದ ರಾಯಚೂರ್ ಡೆಪ್ಯುಟಿ ಕಮೀಷನರ್‌ನವರಿಂದ ವರದಿಯನ್ನು ತರಿಸುವುದಕ್ಕೆ ಏರ್ಪಾಡುಮಾಡಿ. ನಾಳೆದ್ದು ಚರ್ಚೆಮಾಡುವ ಕಾಲದಲ್ಲಿ ನಮಗೆ ಸರ್ಕಾರ ರಾಯಚೂರ್ ಬಗ್ಗೆ ಮಾಹಿತಿಯನ್ನು ಒದಗಿಸಬೇಕು. ಅಲ್ಲಿಯೂ ಕೂಡ ಹುಡುಗರು ಫೀ ರಿಯಾಯತಿಗೆ ಒದ್ದಾಡುತ್ತಿದ್ದಾರೆ. ಬಿಜಾಪುರ್, ಬೆಳಗಾಂ ಮತ್ತು ಗುಲ್ಬರ್ಗಾ ಭಾಗಗಳ ಬಗ್ಗೆ ಏನು ಫೀ ರಿಯಾಯತಿ ಕೊಟ್ಟಿದ್ದೀರಿ ಅದನ್ನು ರಾಯಚೂರು ಮುಕ್ಕಳು ಯಾರು ಯಾರು ಇದ್ದಾರೆ ಅವರಿಗೂ ಕೊಡತಕ್ಕ ಪ್ರಯತ್ನ ಮಾಡಬೇಕು.....

> Fee concession to the students of Raichur should be extended pending discussion of the report that is going to be submitted by Sri Armugam.

† ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಸಭಾಧ್ಯಕ್ಷಣಿಯವರೆ, ಕೆಲಸ ಬಹಳ ನಡೆದಿದೆ ಎಂದು ಸರ್ಕಾರದವರು ಹೇಳುತಿದ್ದಾರೆ. ನಾನು ಆಗಿಲ್ಲ ಎಂದು ಹೇಳತಕ್ಕದ್ದು ಸರಿಯಲ್ಲ. ೨೭ನೇ ತಾರೀಖಿನ ವರೆಗೆ ಸಿಂದಗಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಬಂಡಿಂಗ್ ಕೆಲಸ ಯಾವಯಾವ ಸೆಕ್ಟರಿನಲ್ಲಿ ನಡೆದಿದೆ, ಪ್ರತಿಯೊಂದು ಸೆಕ್ಟರಿನಲ್ಲಿ ಎಷ್ಟೆಷ್ಟು ಕೆಲಸಗಾರರು ಇದ್ದಾರೆ ಎನ್ನುವ ಅಂಕಿಯನ್ನು ಮತ್ತು ಇವೊತ್ತಿನ ಅಂಕಿಯನ್ನು ಕೊಡಬೇಕು. ಆಪ್ಪರ್ ಕೃಷ್ಣ ಕ್ಯಾನಲ್ ವರ್ಕ್ ಪ್ರಾರಂಭ ಮಾಡಿದರೂ ಅಲ್ಲಿ ಜಮೀನು ಇರಲಾರದ ಕಾರಣ ಕೆಲಸ ನಡೆದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಮೂರು ಸಂಗತಿಗಳನ್ನು ಸ್ಪಷ್ಟವಾಗಿ ಹೇಳಬೇಕು. ಡೆಪ್ಯುಟಿ ಕಮೀಷನರ್ ತಿಳಿದುಕೊಂಡಿದಾರೆ ಜನರು ಅಲ್ಲಿಯವರಿಗೆ ಹೋಗುವುದಿಲ್ಲ. ಅಲ್ಲಿಗೆ

ಹೋಗಲು ಅವರಿಗೆ ಶಕ್ತಿಯೂ ಇಲ್ಲ. ಅವರನ್ನು ಟ್ರಾಕ್ಟರ್‌ನಲ್ಲಿ ಬಯಸ್ಸಿ ಬಿಡುವುದಕ್ಕೆ ಸಾಧ್ಯವಿದ್ದರೆ ಬಿಡಲಿ. ಅಲ್ಲಿ ಬಾವಿಗಳಿಗೆ, ಡೀಸಿಲ್ಟಿಂಗ್‌ಗೆ, ಬ್ಯಾಂಕುಗಳಿಂದ ಹಣ ಕೊಡುತ್ತಾರೆ ಬೇಡ ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಕೊಡುತ್ತಾರೋ ಇಲ್ಲವೋ? ಸಿಸಿ ಲಕ್ಷ ರೂಪಾಯಿ ಏನು ಕೊಟ್ಟಿದ್ದಾರೆ ಆ ಹಣ ಕಡಿಮೆ ಇದ್ದರೆ ಹೆಚ್ಚು ಹಣವನ್ನು ಡೀಸಿಲ್ಟಿಂಗ್‌ಗೆ ಕೊಡಿ

ಇಷ್ಟು ಹಣ ಉಪಯೋಗವಾಗಿದೆ, ಇಷ್ಟು ಕೆಲಸ ಮಾಡಿದೆ ಎಂದು ಪ್ರತಿಯೊಂದೇ ಕ್ಷೇತ್ರದ ಸ್ಪಷ್ಟ ಉತ್ತರ ಬೇಕು. ಇಲ್ಲದೆ ಹೋದರೆ ನಮ್ಮ ಜನ ನಮ್ಮನ್ನು ನಿದ್ದೆ ಮಾಡುವುದಕ್ಕೆ ಬಿಡುವುದಿಲ್ಲ. ಊರಿಗೆ ವಾಪಸು ಹೋಗುವ ತಾರೀಖು ಹತ್ತಿರ ಬಂತು, ಹಾರಿಕೆ ಉತ್ತರ ಕೊಡಬೇಡಿ ಯಾವ ಊರು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂದು ಸ್ಪಷ್ಟವಾಗಿ ಅಪ್ಪಣೆ ಕೊಡಿಸಬೇಕು.

[Conditions of men and animals in Drought it Areas]

†ಶ್ರೀ ವಾಟಾಳ್ ನಾಗರಾಜ್ :— ನಾನು ಒಂದು ಮುಖ್ಯ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತರುತ್ತೇನೆ, ಅದು ಪತ್ರಿಕೆಗಳಲ್ಲಿಯೂ ಬಂದಿದೆ. ಈ ಸಭೆಯಿಂದ ಒಬ್ಬರನ್ನು ನಾವು ಆ ಪ್ರದೇಶಗಳಿಗೆ ಕಳುಹಿಸಿದ್ದೇವೆ. ಅವರ ವರದಿ ಬಂದ ಮೇಲೆ ಚರ್ಚೆ ನಡೆಯಬೇಕು ಎಂದು ಇದೆ. ನಾವೇ ಅವರನ್ನು ಕಳುಹಿಸಿ ಸಿಕ್ಕಿ ಹಾಕಿಕೊಂಡಿದ್ದೇವೆ. ಅವರ ಮುಂದೆ ಸತ್ತ ಹೆಣವನ್ನು ಪ್ರದರ್ಶನ ಮಾಡಿದ್ದು ಪೇಪರ್‌ನಲ್ಲಿ ಬಂದಿದೆ, ಅದು ಪಾರ್ಟಿ ಪಾಲಿಟಿಕ್ಸ್ ಅಲ್ಲ. ಒಂದು ಕಡೆ ಹೆಣಗಳ ಪ್ರದರ್ಶನವಾಗಿರುವುದು ಮತ್ತು ಕೆಲವು ಕಡೆ ಊರನ್ನು ಬಿಟ್ಟು ದೇಶಾಂತರ ಹೋಗಿರುವುದು ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಅಲ್ಲಿ ಈಗ ಸತ್ತ ದನಗಳನ್ನು ನಾಯಿಗಳು ಕಿತ್ತು ತಿನ್ನುತ್ತ ಇದ್ದರೆ, ಇನ್ನು ೧೫ ದಿವಸ ಹೋದರೆ, ಮನುಷ್ಯರ ಹೆಣಗಳನ್ನು ನಾಯಿಂಗಳು ಕಿತ್ತು ತಿನ್ನುವ ಪರಿಸ್ಥಿತಿ ಬರುತ್ತದೆ. ಆ ರಿಪೋರ್ಟು ಬರುವವರೆಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳದೆ ಹಾಗೆ ನಿಂತಿರುವುದು ಬಹಳ ದುಃಖದ ಮಾತು ಎಂದು ಹೇಳಬೇಕಾಗುತ್ತದೆ. ಇಷ್ಟು ಜನ ಸತ್ತಿದ್ದಾರೆ, ಸರ್ಕಾರ ಅಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದೆ ? ಎಂದು ಕೇಳಿದರೆ, ಒಂದೇ ಮಾತಿನಲ್ಲಿ ಯಾರೂ ಸತ್ತಿಲ್ಲ. ಹಾಗೆ ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ನಿನ್ನೆ ನಮ್ಮ ಎಸ್.ವೈ. ಪಾಟೀಲರು ಹೇಳಿದರು ನಾವು ಅಲ್ಲಿಗೆ ಹೋದರೆ ಬದುಕುವುದು ಕಷ್ಟ ಇದೆ. ನಮ್ಮನ್ನು ಜನ ತಿನ್ನುತ್ತಾರೆ, ಆ ಪ್ರದೇಶದ ಎಂ.ಎಲ್.ಎ. ಗಳು ಅಲ್ಲಿ ಜನಕ್ಕೆ ಮುಖ ತೋರಿಸುವ ಹಾಗಿಲ್ಲ ಎಂದು. ಊರಲ್ಲಿ ಕೂತುಕೊಂಡು ಸತ್ಯಾಗ್ರಹ ಮಾಡುತ್ತೇವೆ ಎಂದರೆ ಸತ್ಯಾಗ್ರಹ ಮಾಡುವುದಕ್ಕೆ ಬಿಡುವುದಿಲ್ಲ. ಅಮರಣಾಂತರ ಸತ್ಯಾಗ್ರಹ ಮಾಡಬೇಕ ಶ್ರೀಮಾನ್ ಸುರ್‌ಪುರ್ ವಂಲ್ಲಪ್ಪನವರು ಹೇಳಿದಾಗ ಇವರನ್ನು ಅಲ್ಲಿಯವರೆಗೆ ಬಿಡಲಿಲ್ಲ. ಅಲ್ಲಿ ಜನ ಸಾಯುತ್ತಿದ್ದಾರೆ. ಈ ಬರಗಾಲ ಇಡೀ ರಾಜ್ಯದಲ್ಲಿ ಬಂದಿಲ್ಲ, ಕೇವಲ ಒಂದೂವರೆ ಜಿಲ್ಲೆಯಲ್ಲಿ ೫-೬ ತಿಂಗಳಿಂದ ಬಂದಿದೆ. ಒಂದೂವರೆ ಜಿಲ್ಲೆಗೆ ಬಂದಿರುವ ಬರಗಾಲವನ್ನು ಸರಿಪಡಿಸುವುದಕ್ಕೆ ಸರ್ಕಾರ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಪಕ್ಕದ ರಾಜ್ಯವಾದ ಮದ್ರಾಸ್ ರಾಜ್ಯದಲ್ಲಿ ಯಾವುದೋ ಒಂದು ಪ್ರದೇಶಕ್ಕೆ ನೀರು ನುಗ್ಗಿದ ತಕ್ಷಣ ಅಲ್ಲಿನ ಸರ್ಕಾರ ರೈಲನ್ನು ಹಾಕಿ ಜನತೆಗೆ ಎರಡು ದಿನದಲ್ಲಿ ಸಂಪೂರ್ಣ ವ್ಯವಸ್ಥೆ ಮಾಡಿಬ್ಬಾರೆ. ಇಲ್ಲಿ ಐದು ತಿಂಗಳಿಂದ ಸರ್ಕಾರ ಈ ಒಂದೂವರೆ ಜಿಲ್ಲೆಗೆ ಏನೂ ಮಾಡುವುದಕ್ಕೆ ಆಗಿಲ್ಲ, ಎಂದರೆ ಈ ಸರ್ಕಾರ ಉಳಿಯುವುದಕ್ಕೆ ಸಾಧ್ಯವಿದೆಯೇ ? ಇವರು ರಾಜೀನಾಮೆ ಕೊಟ್ಟು ಹೋಗಲಿ ಎಂದು ಹೇಳುತ್ತೇನೆ. ಒಂದೂವರೆ ಜಿಲ್ಲೆಯ ಜನರ ಹಸಿವೆಯನ್ನು ನೀಗತಕ್ಕ ಕೆಲಸವನ್ನು ಈ ಸರ್ಕಾರಮಾಡಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ಯಾವುದೇ ರಾಜ್ಯದಲ್ಲಿ ಜನರು ಬರಗಾಲದಿಂದ ಸಾಯುತ್ತಿದ್ದಾರೆ, ಅಲ್ಲಿ ರಾಜ್ಯಭಾರ ಮಾಡಿಕೊಂಡು ಏತಕ್ಕೆ ಇರಬೇಕು ? ಎನ್ನುವುದು ಮೂಲಭೂತವಾದ ಪ್ರಶ್ನೆ ಬಣ್ಣ ಬಳಿಯತಕ್ಕ ಹೇಳಿಕೆ ಕೊಡದೆ ಸತ್ಯ ಸಂಗತಿಯನ್ನು ಈ ಸಭೆಯ ಮುಂದೆ ಇಟ್ಟು ಜನರ ಪ್ರಾಣ ಉಳಿಸಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ :— ಬೀದರ್, ಗುಲ್ಬರ್ಗ ಜಿಲ್ಲೆಗಳಿಗೆ ನಾವು ಹೋಗಿ ಬಂದಿದ್ದೇವೆ ಚರ್ಚೆಯಾಗುವಾಗ ಅನೇಕ ವಿಷಯಗಳನ್ನು ಹೇಳಿದ್ದೇನೆ. ಹಸಿವೆಯಿಂದ ಸತ್ತಿರುವುದು ನಿಜ. ಎಲ್ಲಕ್ಕಿಂತಲೂ ಮುಖ್ಯವಾಗಿ ಬೀದರ್ ಮತ್ತು ಗುಲ್ಬರ್ಗದಲ್ಲಿ ಬಾವಿಗಳು ಬೇಕು. ಅದರಲ್ಲೂ ಬೀದರ್ ಜಿಲ್ಲೆಯೊಳಗೆ ಡೀಪನಿಂಗ್‌ಆಫ್ ವೆಲ್ಸ್ ಅತ್ಯಂತ ಅವಶ್ಯ. ಇದನ್ನು ತುರ್ತಾಗಿಮಾಡಬೇಕು. ಇದಕ್ಕೆ ಹಣವನ್ನು ಟಿ ಐ ಡಿ ಬಿ ಮುಖಾಂತರ ಕೊಡುವುದು ೨-೩ ತಿಂಗಳು ಲೇಟ್ ಆಗುತ್ತದೆ. ಆ ಜಿಲ್ಲೆಗೆ ತಕ್ಷಣ ೧೨ ಸಾವಿರ ಬಾವಿಗಳನ್ನು ತೋಡಿಸುವುದು ಅತ್ಯಂತ ಅವಶ್ಯಕ. ಈಗ ಅದಕ್ಕಾಗಿ ಅವರಿಗೆ ೪ ನೂರು ರೂಪಾಯಿ ಕೊಡುವುದು ಏನೂ ಸಾಲದು, ೨-೩ ಸಾವಿರ ರೂಪಾಯಿಯವರೆಗೆ ಒಂದು ಬಾವಿಗೆ ಕೊಟ್ಟು, ತೋಡಿಸಿಕೊಂಡು ವುದನ್ನು ತಾವೇ ವಹಿಸಿಕೊಳ್ಳಬೇಕು.